# ಜಿಲ್ಲಾಧಿಕಾರಿ, ತುಮಕೂರು ಜಿಲ್ಲೆ, ತುಮಕೂರು ರವರ ನ್ಯಾಯಾಲಯ

## ಪ್ರಕರಣದ ಸಂಖ್ಯೆ: RP-45/2011-12

ಉಪಸ್ಥಿತರು: K.P.ಮೋಹನ್ ರಾಜ್.
ಜಿಲ್ಲಾಧಿಕಾರಿ
ತುಮಕೂರು ಜಿಲ್ಲೆ, ತುಮಕೂರು.

| ಅರ್ಜಿದಾರರು | ವಿರುದ್ಧ | ಎದುರುದಾರರು |
|---|---|---|
| ರೇಣುಕಯ್ಯ ಬಿನ್ ಗಂಗಸಿದ್ದಯ್ಯ<br>ಪೆಮ್ಮನಹಳ್ಳಿ, ಊರ್ಡಿಗೆರೆ ಹೋಬಳಿ,<br>ತುಮಕೂರು ತಾಲ್ಲೂಕು. | | 1. ಉಪ ವಿಭಾಗಾಧಿಕಾರಿಗಳು<br>ತುಮಕೂರು ಉಪ ವಿಭಾಗ, ತುಮಕೂರು<br>2. ಕೆ.ರಂಗನಾಥ್,<br>ಗ್ರಾಮ ಲೆಕ್ಕಿಗರು<br>ತುರುವೇಕೆರೆ ತಾಲ್ಲೂಕು ಕಛೇರಿ.<br>3. ಎನ್ ರಂಗರಾಜ ಅರಸ್<br>4. ವೆಂಕಟರಾಜು ಬಿನ್ ರಾಮರಾಜು<br>(3 ಮತ್ತು 4ನೇ ಎದುರುದಾರರ ವಾಸ:<br>ಪೆಮ್ಮನಹಳ್ಳಿ ಗ್ರಾಮ,<br>ಊರ್ಡಿಗೆರೆ ಹೋಬಳಿ,<br>ತುಮಕೂರು ತಾಲ್ಲೂಕು. |

ಈ ರಿವಿಜನ್ ಅರ್ಜಿಯನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮದ ಕಲಂ 136(3) ರಡಿಯಲ್ಲಿ ತುಮಕೂರು ತಾಲ್ಲೂಕು, ಊರ್ಡಿಗೆರೆ ಹೋಬಳಿ, ಪೆಮ್ಮನಹಳ್ಳಿ ಗ್ರಾಮಕ್ಕೆ ಸೇರಿದ ಸ. ನಂ 3/1 ರಲ್ಲಿ ಅಕ್ರಮವಾಗಿ ಹೊಸದಾಗಿ RTC ಯನ್ನು ಗಣಕೀಕರಣದಲ್ಲಿ ಸ.ನಂ 3/8 ರಲ್ಲಿನ 2 ಎಕರೆ 10 ಗುಂಟೆ ಎಂದು ಸೃಷ್ಟಿಸಿದ್ದು, ಇದನ್ನು ರದ್ದು ಪಡಿಸಲು ಹಾಗೂ ಸಂಬಂಧ ಪಟ್ಟ ಗ್ರಾಮಲೆಕ್ಕಿಗರು ಮತ್ತು ರಾಜಸ್ವ ನಿರೀಕ್ಷಕರ ವಿರುದ್ಧ ಕ್ರಮಕೈಗೊಂಡು, ಅಕ್ರಮವಾಗಿ ಸೃಷ್ಟಿಸಿರುವ ದಾಖಲೆಗಳನ್ನು ರದ್ದುಪಡಿಸಿ ವರದಿ ಸಲ್ಲಿಸಲು ಪ್ರಾದೇಶಿಕ ಆಯುಕ್ತರು, ಬೆಂಗಳೂರು ಇವರು ನೀಡಿರುವ ನಿರ್ದೇಶನದಂತೆ ಪ್ರಕರಣವನ್ನು ಸರ್ಕಾರದ ಪರವಾಗಿ ಉಪವಿಭಾಗಾಧಿಕಾರಿಗಳು, ತುಮಕೂರು ಉಪವಿಭಾಗ, ಇವರು ವಿಚಾರಣೆ ನಡೆಸಿ ಸದರಿ ಸ.ನಂ.3/1 ರ 2.10 ಎಕರೆ ಸರ್ಕಾರಿ ಫಡಾ ಎಂದು ಇದ್ದು, ಇದನ್ನು ಸ.ನಂ.3/8 ಎಂದು ಸುಳ್ಳು ದಾಖಲೆ ಆಧಾರದ ಮೇಲೆ ಹೊಸ RTC ನಮೂದಿಸಿ ಅಕ್ರಮವೆಸಗಿದ್ದು, ಇದು ಸರಿಯಾದ ಕ್ರಮವಲ್ಲ. ಇದನ್ನಾದರಿಸಿ ಎಂ.ಆರ್ 3/04-05 ಆದೇಶವಾಗಿರುವುದು ಕ್ರಮಬದ್ದವಲ್ಲ. ಆದ್ದರಿಂದ ಸ.ನಂ.3/8 ರಲ್ಲಿ 2.10 ಎಕರೆ ಜಮೀನಿಗೆ ಸಂಬಂಧಪಟ್ಟಂತೆ ಮಾತ್ರ ಎಂ.ಆರ್.13/83-84. ಎಂ.ಆರ್ 11/03-04 ಹಾಗೂ ಎಂ.ಆರ್ 3/04-05 ರನ್ನು ರದ್ದುಪಡಿಸಿ ಹಿಸ್ಸಾ ಟಿಪ್ಪಣಿಯಂತೆ ಸ. ನಂ 3/1 ರಲ್ಲಿ 2 ಎಕರೆ 10 ಗುಂಟೆ ಪೈಕಿ 0.10 ಗುಂಟೆ ಖರಾಬು ಕಳೆದು 2-00 ಎಕರೆ ವಿಸ್ತೀರ್ಣವನ್ನು ಸರ್ಕಾರಿ ಫಡಾ ಎಂದು ನಮೂದಿಸಲು ಉಪವಿಭಾಗಾಧಿಕಾರಿ, ತುಮಕೂರು ಉಪವಿಭಾಗ, ತುಮಕೂರು ರವರು ಹೊರಡಿಸಿದ ನಂ ಅರ್.ಆರ್.ಟಿ.ಸಿಅರ್-450/2009-10 ರ ಕ್ರಮಾಂಕದ ದಿನಾಂಕ: 13-04-2011ರ ಆದೇಶವನ್ನು ಪ್ರಶ್ನಿಸಿ ಸಲ್ಲಿಸಲಾಗಿದೆ.

ಪ್ರಕರಣವನ್ನು ಕಡತದ ಮೇಲೆ ತೆಗೆದುಕೊಂಡು ಉಭಯತ್ರರಿಗೂ ವಿಚಾರಣಾ ತಿಳುವಳಿಕೆ ನೀಡಿ ವಿಚಾರಣೆ ನಡೆಸಲಾಗಿದೆ. ಪ್ರಕರಣವನ್ನು ದಿನಾಂಕ:20-6-2016 ರಂದು ಕರೆದಾಗ ಅರ್ಜಿದಾರರ ಪರ ವಕೀಲರು ಹಾಜರಿದ್ದು, ಪ್ರತಿವಾದಿಗಳು ಗೈರು ಹಾಜರಾಗಿರುತ್ತಾರೆ, ಹಾಜರಿದ್ದ ರಿವಿಜನ್ ಅರ್ಜಿದಾರರ ಪರ ವಕೀಲರು ಪ್ರಕರಣವನ್ನು Dismissed as not Pressed ಎಂಬುದಾಗಿ ಆದೇಶಿಸಲು ಕೋರಿ ಮೆಮೋ ಸಲ್ಲಿಸಿದ್ದು, ಸದರಿ ಮೆಮೋದ ಅಂಶ ಕೆಳಕಂಡಂತಿದೆ.

Memo

That the appellant submits that the matter in dispute has been settled outside the court and the applicant does not press the petition. Hence the petition may be dismissed as not pressed, in the interest of justice.

Sd/-

1. Advocate for Appellant
2. LTM of Appellant.

ಉಪವಿಭಾಗಾಧಿಕಾರಿಗಳು, ತುಮಕೂರು ಉಪವಿಭಾಗ ಇವರು ಅವಧಿಕೃತವಾಗಿ ಸೃಷ್ಟಿಸಿರುವ ಪೆಮ್ಮನಹಳ್ಳಿ ಗ್ರಾಮದ ಸ.ನಂ.3/8 ರ RTC ಮತ್ತು MR ಗಳನ್ನು ರದ್ದುಪಡಿಸಿ ಸ.ನಂ.3/1 ರ 2.10 ಎಕರೆ ಜಮೀನನ್ನು ಸರ್ಕಾರಿ ಫಡಾ ಎಂದು ನಮೂದಿಸಲು ಆದೇಶಿಸಿದ್ದು, ಸಂಬಂಧಪಟ್ಟ ಆಪಾದಿತ ನೌಕರರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇರುವುದರಿಂದ ರಿವಿಜನ್ ಅರ್ಜಿದಾರರ ಪರ ವಕೀಲರು ಹಾಗೂ ಅರ್ಜಿದಾರರು ಜಂಟಿಯಾಗಿ ಸಲ್ಲಿಸಿರುವ ಮೇಲಿನ ಮೆಮೋ ಅಂಶಗಳನ್ನು ಒಪ್ಪಿ ಕೆಳಗಿನಂತೆ ಆದೇಶಿಸಿದೆ

## ಆದೇಶ

ಮೇಲೆ ತಿಳಿಸಿದ ಕಾರಣದಿಂದಾಗಿ ಅರ್ಜಿದಾರರು ಸಲ್ಲಿಸಿದ ರಿವಿಜನ್ ಅರ್ಜಿಯನ್ನು Dismissed as not Pressed ಎಂಬುದಾಗಿ ಆದೇಶಿಸಿ ಪ್ರಕರಣವನ್ನು ಈ ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಗಿದೆ.

ಈ ಆದೇಶವನ್ನು ದಿನಾಂಕ: 06/01/2017 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

KPM 06/1/17
ಜಿಲ್ಲಾಧಿಕಾರಿ
ತುಮಕೂರು ಜಿಲ್ಲೆ.